


ಹಠಾತ್ ತೀರ್ಮಾನಗಳಿಂದ ರೂಪುತಳೆಯುವ ಬದುಕು. ಯಾವುದು ಸರಿ, ಯಾವುದು ಸರಿಯಲ್ಲ ಇದು ಗೊತ್ತಿದ್ದರೂ ತಿಳಿವಳಿಕೆಗೆ ಅನುಗುಣವಾಗಿ ವರ್ತಿಸಲಾಗದ ಬದುಕು. ಈ ಕಾವ್ಯಗಳನ್ನು ಬಿಡಿ ಘಟನೆಗಳ ಸರಣಿಯೆಂದು ಓದದೆ, ಒಟ್ಟಂದದಲ್ಲಿ ನೋಡಿದಾಗ. ಒಂದು ಕಾದಂಬರಿಯ ಓದಿನಲ್ಲಿ ದೊರೆಯುವ ಸೂಕ್ಷ್ಮಗಳೆಲ್ಲವೂ ಸಿಗುತ್ತವೆ.

ಋ. ಪಂಪನು ಚಿತ್ರಿಸಿರುವ ಸ್ತ್ರೀಲೋಕವು ಅವನ ಕಾಲದ ಮತ್ತು ನಮ್ಮ ಕಾಲದ ಪುರುಷಪ್ರಧಾನ ನಿಲುವುಗಳಿಗೆ ಹಿಡಿದ ಕನ್ನಡಿಯಂತೆ ಕಾಣುತ್ತದೆ. ಪರಾಕ್ರಮ ಪ್ರಧಾನವಾದ ಪಂಪನ ಕಾಲದಲ್ಲಂತೂ ದ್ರೌಪದಿಯಂತಹ ಪಾತ್ರವನ್ನೂ ವಿಸ್ತರಿಸುವುದಕ್ಕೆ ಅವಕಾಶವಿರಲಿಲ್ಲ. ಕುಮಾರವ್ಯಾಸನ ದ್ರೌಪದಿಯೇ ಎಷ್ಟೋ ವಾಸಿ. ಹೆಚ್ಚೆಂದರೆ, ಅಲ್ಲಿ ಕಾಣುವುದು ಗಂಡಿನ ಕಣ್ಣುಗಳಲ್ಲಿ ಮೂಡಿರುವ ಹೆಣ್ಣಿನ ಬಿಂಬ.

## 3

ಪಂಪನು ಕಾವ್ಯದ ಆಕೃತಿ ಮತ್ತು ಭಾಷೆಗಳಿಗೆ ಸಂಬಂಧಿಸಿದಂತೆ ಎದುರಿಸುತ್ತಿದ್ದ ಸವಾಲುಗಳು ಮತ್ತು ಕಂಡುಕೊಂಡ ಉತ್ತರಗಳು ಕೂಡ ಇಂದಿಗೂ ಪ್ರಸ್ತುತವೆಂದು ಕಾಣುತ್ತದೆ. ಅವುಗಳಲ್ಲಿ ಕೆಲವನ್ನು ಇನ್ನು ಮುಂದೆ ಗಮನಿಸಬಹುದು.